# ಮಾಹಿತಿದಾರರನ್ನು ಸೃಷ್ಟಿಸುತ್ತಿರುವ ಸರ್ಕಾರವನ್ನು ಬಯಲುಗೊಳಿಸೋಣ

# ಆದಿವಾಸಿಗಳ ಹೋರಾಟಕ್ಕೆ ದ್ರೋಹ ಬಗೆಯುತ್ತಿರುವ ದ್ರೋಹಿ

# ಏಜೆಂಟರನ್ನು ಬಹಿಷ್ಕರಿಸೋಣ !

## ಪ್ರಿಯ ಆದಿವಾಸಿ ಜನರೇ,

ಗೌಡ್ಲು ಮಲೆಕುಡಿಯ ಇತರೆ ಆದಿವಾಸಿ ಜನರನ್ನು ಸರ್ಕಾರ ಮತ್ತು ಅದರ ಪೋಲೀಸ್ ಪಡೆಗಳು ದಿನದಿಂದ ದಿನಕ್ಕೆ ಮತ್ತುಷ್ಟು ಸಂಕಷ್ಟ –ಸಮಸ್ಯೆಗಳಿಗೆ ದೂಡುತ್ತಿವೆ. ಮೊದಲು ಅವರು ರಾಷ್ಟ್ರೀಯ ಉದ್ಯಾನ ಯೋಜನೆ ಹೆಸರಿನಲ್ಲಿ ಒಕ್ಕಲೆಬ್ಬಿಸಿ ಬೀದಿಪಾಲು ಮಾಡಲು ಬಂದರು. ಮೀಸಲು ಆರಣ್ಯ ಯೋಜನೆ ಹೆಸರಲ್ಲಿ ಬಲಾತ್ಕಾರವಾಗಿ ಕ್ರೂರವಾಗಿ ಒಕ್ಕಲೆಬ್ಬೆಸಿದರು. ಆರಣ್ಯ ಕಾಯ್ದೆ ಹೆಸರಿನಲ್ಲಿ ದಿನನಿತ್ಯ ಕಿರುಕುಳ ಕೊಟ್ಟರು. ಆದರೆ ಜನರು ಅದರ ವಿರುದ್ಧ ಕಾನೂನು ಬದ್ಧವಾಗಿಯೂ ತಿರುಗಿ ಬಿದ್ದರು. ಬಗ್ಗದಿದ್ದಾಗ ಸಶಸ್ತ್ರ ಹೋರಾಟವನ್ನು ಪ್ರಾರಂಭಿಸಿದರು. ಸರ್ಕಾರ ಸ್ವಲ್ಪ ಹಿಂದ್ಸರಿದು ಉದ್ಯಾನ ಯೋಜನೆ –ಮೀಸಲು ಆರಣ್ಯದಿಂದ ಒಕ್ಕಲೆಬ್ಬಸುವುದಿಲ್ಲ ಎಂದು ಹೇಳುತ್ತಾ ನಕಲಿ ಹಕ್ಕುಪತ್ರ ಮತ್ತು ಮೋಸದ ಬೆಣ್ಣೆ ಹಚ್ಚುವ ಸೌಲಭ್ಯಗಳನ್ನು ಕೊಟ್ಟರು. ಜೊತೆಗೆ ನಿತ್ಯ ಜನರಿಗೆ ಕೋವಿ ಹಿಡಿದು ಬೆದರಿಸಲು ಪ್ರಾರಂಭಿಸಿದರು. ರಾತ್ರಿ ಮನೆಗೆ ನುಗ್ಗುವುದು ಇದ್ದಕ್ಕಿದ್ದಂತೆ ಮನೆ ಸುತ್ತುವರಿದು ವಿಚಾರಣೆಗೊಳಪಡಿಸಿ ಹೊಡೆಯುವುದು, ಮುಕ್ತ ಸಂಚಾರಕ್ಕೆ ನಿರ್ಬಂಧ ಹೇರುವುದು, ಸ್ವತಂತ್ರವಾಗಿ ಬದುಕಲು ಬಿಡದಿರುವುದು, ಯಾವುದೇ ಕಾನೂನು ಪಾಲಿಸದೆ ಅರೆಸ್ಟ್ ಮಾಡಿ ವಿಚಾರಣೆಗೊಳಪಡಿಸುವುದು, ಬೆದರಿಸುವುದು, ಸುಳ್ಳು–ಕೇಸುಗಳನ್ನು ಹಾಕುವುದು ಎದೆಗೆ ಕೋವಿ ಇಟ್ಟು ಬೆದರಿಸುವುದು, ಮಹಿಳೆಯರಿಗೆ ತುಚ್ಛವಾಗಿ ಬೈಯುವುದು, ಮಹಿಳೆಯರನ್ನು ಬಳಸಿಕೊಳ್ಳಲು ಯತ್ನಿಸುವುದು ಇತ್ಯಾದಿ ಮಾಡುತ್ತಿದ್ದಾರೆ. ಇತ್ತೀಚೆಗೆ ಬಿಜೆಪಿ ಸರ್ಕಾರ ಬಂದಮೇಲಂತೂ ಇವು ಮಿತಿಮೀರಿದೆ. ಜನರನ್ನು ಬಂಧಿಸಿ ಚಿತ್ರ ಹಿಂಸೆ ಕೊಟ್ಟು ವರ್ಷಗಟ್ಟಲೇ ಜೈಲಿನಲ್ಲಿ ಇಡುವ ಬೆದರಿಕೆ ತಂತ್ರಗಳನ್ನು ಜಾರಿಗೊಳಿಸುತ್ತಿದ್ದಾರೆ. ಇದಕ್ಕೆಲ್ಲ ಅನುಕೂಲವಾಗುವಂತೆ ಪೋಲೀಸ್ ಕ್ಯಾಂಪ್‌ಗಳನ್ನು ತೆರೆಯುತ್ತಿದ್ದಾರೆ. ಈ ಅಪ್ರಜಾತಾಂತ್ರಿಕ ದಮನಕ್ಕೆ ಸಿಪಿಐ (ಮಾವೋವಾದಿ) ಪಕ್ಷವನ್ನು ನೆಪ ಮಾಡಿಕೊಳ್ಳುತ್ತಿದ್ದಾರೆ.

ಸರ್ಕಾರ ಇಷ್ಟೆಲ್ಲ ಬೆದರಿಸುವ ಬಲೆಯನ್ನು ಹೆಣೆದ ನಂತರ ಈಗ ಮತ್ತೆ ಒಕ್ಕಲೆಬ್ಬಿಸುತ್ತೇವೆ ಎನ್ನುವ ತಮ್ಮ ನಿಜ ಬಣ್ಣವನ್ನು ಬಯಲು ಮಾಡಿಕೊಳ್ಳುತ್ತದೆ. ಜೂನ್ 11ರಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಈ ಬಣ್ಣವನ್ನು ಕೇಂದ್ರ ಅರಣ್ಯ ಮಂತ್ರಿ ಜೈರಾಂ ರಮೇಶ್ ತನ್ನ ಸ್ಪಷ್ಟ ಮಾತುಗಳಲ್ಲಿ ಹೇಳಿದ್ದಾರೆ. ನಾವು ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಹೀಗೆ ಸರ್ಕಾರ ಆದಿವಾಸಿಗಳನ್ನು ಒಕ್ಕಲೆಬ್ಬಿಸಿ ಸಾಮೂಹಿಕವಾಗಿ ಬೀದಿಪಾಲು ಮಾಡಿ ನಾಶ ಮಾಡುವ ಕೆಲಸಕ್ಕೆ ಕೈ ಹಾಕುತ್ತಿದೆ. ಇದರ ವಿರುದ್ಧ ಆದಿವಾಸಿಗಳೆಲ್ಲರೂ –ಜೊತೆಗೆ ಇತರೆ ಎಲ್ಲಾ ಬಡವರೊಂದಿಗೆ ಸೇರುತ್ತಾ ದೃಢವಾಗಿ ಹೋರಾಟವನ್ನು ಮುಂದುವರೆಸುತ್ತಿದ್ದಾರೆ. ವಿರೋಚಿತವಾಗಿ ಪೋಲಿಸರ ದರ್ಪ, ದೌರ್ಜನ್ಯ ಹಿಂಸೆಗಳನ್ನು ಎದುರಿಸುತ್ತಿದ್ದಾರೆ. ಉನ್ನತವಾದ ತ್ಯಾಗಗಳನ್ನು ಹೋರಾಟಕ್ಕೋಸ್ಕರ ಮಾಡುತ್ತಿದ್ದಾರೆ. ಇದು ಅವರಿಗೆ ಅಳಿವು –ಉಳಿವಿನ ವಿಚಾರವಾಗಿದೆ. ಅದ್ದರಿಂದಲೇ ನಾವೆಲ್ಲ ಇದುವರೆಗೂ ಸ್ವಲ್ಪವಾದರೂ ಸ್ವಾಭಿಮಾನದಿಂದ ಆತ್ಮಗೌರವದಿಂದ ಬದುಕುವಂತಾಗಿದೆ. ಆದರೆ ಸರ್ಕಾರ ಆದಿವಾಸಿಗಳನ್ನು ಒಕ್ಕಲೆಬ್ಬಿಸುವ ದುಷ್ಟ ಸಂಚಿನಿಂದ ಆದಿವಾಸಿಗಳೊಳಗೆ ಒಡಕನ್ನು ಸೃಷ್ಟಿಸುತ್ತಿದೆ. ಆದಿವಾಸಿಗಳ ನಡುವೆ ಆಸೆಬುರುಕರನ್ನು ದುರ್ಬಲರನ್ನು ಬಳಸಿಕೊಂಡು ಪೋಲೀಸ್ ಏಜೆಂಟರನ್ನು ಸೃಷ್ಟಿಸುತ್ತಿವೆ ಮತ್ತು ಆದಿವಾಸಿಗಳ ನಡುವೆ ಭ್ರಷ್ಟತೆಯನ್ನು ಬೆಳೆಸಲು ಪ್ರಯತ್ನಿಸುತ್ತಾ ಪರಸ್ಪರ ಎತ್ತಿಕಟ್ಟುವ ಕುತಂತ್ರ ಮಾಡುತ್ತಿದ್ದಾರೆ.

ನಮ್ಮ ನಡುವೆ ತಮ್ಮ ಆಸೆಬುರುಕುತನಕ್ಕಾಗಿ ಇಡೀ ಆದಿವಾಸಿ ಸಮುದಾಯದ ಹೋರಾಟ ಹಿತಾಸಕ್ತಿಗಳನ್ನು ಬಲಿಕೊಡುವ ಪೋಲೀಸ್ ಏಜೆಂಟರುಗಳು ತುಂಬಾ ಅಪಾಯಕಕಾರಿಯಾಗಿದ್ದಾರೆ. ಅವರು ಆದಿವಾಸಿಗಳ ದ್ರೋಹಿಗಳಾಗಿದ್ದಾರೆ, ಅವರು ಆದಿವಾಸಿಗಳನ್ನು ಪೋಲಿಸರ ಗುಂಡಿಗೆ ಬಲಿಹಾಕುವ ನೀಚರಾಗಿದ್ದಾರೆ. ಹೋರಾಟ ನಾಶ ಮಾಡಿ ಒಕ್ಕಲೆಬ್ಬಿಸಲು ಅವರು ಊರುಗೋಲಾಗಿದ್ದಾರೆ, ಮತ್ತು ಸ್ವಾರ್ಥಕ್ಕಾಗಿ ಆದಿವಾಸಿ ಸ್ವಾಯುತ್ತತೆಗೆ ವಿರುದ್ಧವಾಗಿ ಅವರನ್ನು ಬೀದಿಪಾಲುಮಾಡುವ ಸರ್ಕಾರದ ಗುಲಾಮರಾಗಿದ್ದಾರೆ. ಇಂಥ ದ್ರೋಹಿಗಳನ್ನು ನಾವು ಗಂಭೀರವಾಗಿ ಪರಿಗಣಿಸಬೇಕು. ಇಂತಹ ಮಾಹಿತಿದಾರ ದ್ರೋಹಿಗಳೇ ನಮ್ಮ ನೆಚ್ಚಿನ ನಾಯಕರಾದ ಪರಮೇಶ್ವರ ಮತ್ತು ಸುಂದರೇಶ್, ಅಲ್ಲದೆ ಆದಿವಾಸಿ ಹಿತಾಸಕ್ತಿಗಾಗಿ ಶ್ರಮಿಸುತ್ತಿದ್ದ ರಾಮೇಗೌಡ್ರು-ಕಾವೇರಕ್ಕರ ಹುತಾತ್ಮತೆಗೆ ಕಾರಣರಾಗಿದ್ದಾರೆ. ಇಂತ ದ್ರೋಹಿಗಳೇ ನಮ್ಮೆಲ್ಲರ ನೆಚ್ಚಿನ ನಾಯಕರಾಗಿದ್ದ ಸಾಕೇತ್ ರಾಜನ್‌ರಂತಹ ಧೀಮಂತ ನಾಯಕರ ಹುತಾತ್ಮತೆಗೆ ಮೂಲವಾಗಿದ್ದಾರೆ. ಇಂತಹ ದ್ರೋಹ ಕೆಲಸದ ಮೂಲಕವೇ ಇವರು ತಮ್ಮ ಸ್ವಾರ್ಥವನ್ನು ಕಾಪಾಡಿಕೊಂಡು ಆದಿವಾಸಿ ಸಮುದಾಯವನ್ನು ಬಲಿಕೊಡುತ್ತಾ ಪೋಲೀಸರು ಅವರ ಮೇಲೆ ನಿರಂತರ ದೌರ್ಜನ್ಯ ನಡೆಸಲು ಅನುಕೂಲವಾಗುವಂತೆ ಏಜೆಂಟರಂತೆ ವರ್ತಿಸುತ್ತಿದ್ದಾರೆ.

ಇವರೇ ಮಾವಿನ ಹೊಲ ಎನ್‌ಕೌಂಟರ್, ಒಡೆಯರ ಮಠ ಹತ್ಯಾಕಾಂಡಕ್ಕೆ ಕಾರಣರಾಗಿದ್ದಾರೆ. ಇವರು ತಮ್ಮ ಹಿತಕ್ಕಾಗಿ ತಮ್ಮ ತಂದೆ-ತಾಯಿ,ಸಹೋದರ-ಸಹೋದರಿಯನ್ನು ಬಲಿಕೊಡಲು ಹೇಸದ ಅತ್ಯಂತ ದುಷ್ಟ ಬುದ್ಧಿಯವರಾಗಿದ್ದಾರೆ.

ಇಂತಹ ಆದಿವಾಸಿ ದ್ರೋಹಿಗಳು ಯಾರೆಂಬುದು ಇಡೀ ಆದಿವಾಸಿ ಸಮುದಾಯಕ್ಕೆ ಮತ್ತು ಸಿಪಿಐ (ಮಾವೋವಾದಿ) ಪಕ್ಷಕ್ಕೆ ಚೆನ್ನಾಗಿ ಗೊತ್ತಿದೆ. ಇಂತಹವರನ್ನು ಇಡೀ ಆದಿವಾಸಿ ಸುಮುದಾಯ ಬಹಿಷ್ಕರಿಸಿ-ಶಿಕ್ಷಿಸಬೇಕಾಗಿದೆ. ಅವರ ಮೇಲೆ ಕ್ರಮ ಕೈಗೊಳ್ಳಬೇಕಾಗಿದೆ. ಇಲ್ಲದಿದ್ದಲ್ಲಿ ಯಾರೂ ಆತ್ಮಗೌರವದಿಂದ ಬದುಕಲು ಸಾಧ್ಯವಿಲ್ಲ.

ಇಡೀ ಆದಿವಾಸಿ ಸಮುದಾಯ ಆ ರೀತಿ ಆಲೋಚಿಸುತ್ತಿದೆ ಅಲ್ಲದೆ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕಾದ ಅವಶ್ಯಕತೆ ಬಹಳ ತುರ್ತಾಗಿದೆ ಮತ್ತು ಅದು ನಮ್ಮ ಬದುಕಿಗಾಗಿನ ಹೋರಾಟದಲ್ಲಿ ದ್ರೋಹಿಗಳನ್ನು ಹೊರಗಟ್ಟುವ ಕೆಲಸ ಕೂಡ ಮುಖ್ಯವಾದದು ಎಂದು ಗ್ರಹಿಸುತ್ತಾ ಆ ದಿಕ್ಕಿನಲ್ಲಿ ಕೆಲಸ ಮಾಡಬೇಕಾಗಿದೆ.

- ❖ ಆದಿವಾಸಿ ಜನ ಸಮೂಹದಿಂದ ದ್ರೋಹಿಗಳನ್ನು ಪ್ರತ್ಯೇಕಿಸೋಣ !
- ❖ ಹೋರಾಟ ದ್ರೋಹಿಗಳನ್ನು ಬಹಿಷ್ಕರಿಸೋಣ ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳೋಣ !
- ❖ ದ್ರೋಹಿಗಳು ದೇಶದ್ರೋಹಿಗಳು !
- ❖ ಹೋರಾಟಗಾರರು ದೇಶಪ್ರೇಮಿಗಳು !

(ಸಿಪಿಐ) ಮಾವೋವಾದಿ
ಧೃಕ್ಷಥ ಪ್ರದೇಶ
ಕರ್ನಾಟಕ

ಜುಲೈ 2009